ಇ) ಗಣಕ ಯಂತ್ರಗಳನ್ನು ಒದಗಿಸುವುದೊಂದಿಗೆ ಸಿಬ್ಬಂದಿ ವರ್ಗದವರಲ್ಲಿ ಮಾಹಿತಿ ತಂತ್ರಜ್ಞಾನದ ಬಗ್ಗೆ ಪರಿಣತಿಯನ್ನು ಬೆಳೆಸುವ ದಿಶೆಯಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಾಹಿತಿ ತಂತ್ರಜ್ಞಾನ ಇಲಾಖೆಯೊಂದೇ 2002-2003ನೇ ಸಾಲಿನಲ್ಲಿ 2611 ಸಿಬ್ಬಂದಿಗಳಿಗೆ ತರಬೇತಿ ನೀಡಿರುತ್ತದೆ.

ಗಣಕಯಂತ್ರಗಳನ್ನು ಮತ್ತು ಗಣಕಯಂತ್ರಗಳಲ್ಲಿ ತರಬೇತಿ ನೀಡುವುದರೊಂದಿಗೆ ಆಡಳಿತದಲ್ಲಿ ಗುಣಮಟ್ಟ ಮತ್ತು ದಕ್ಷತೆಯನ್ನು ಸುಧಾರಣೆ ಮಾಡುವ ದಿಶೆಯಲ್ಲಿ ವಿನ್ಯಾಸಗಳನ್ನು ಮತ್ತು ಅವುಗಳ ಅಳವಡಿಕೆಯನ್ನು ಬಳಕೆಗೆ ತರಲಾಗಿದೆ. ನಾಗರೀಕರಿಗೆ ಉತ್ತಮ ಮಟ್ಟದ ಸೇವೆಯನ್ನು ಒದಗಿಸಲು ಇವು ಸಹಕಾರಿಯಾಗುತ್ತದೆ. ಭೂಮಿ, ಖಜಾನೆ, ಕಾವೇರಿ ಪಟ್ಟಣ ಸ್ಥಳೀಯ ಸಂಸ್ಥೆಗಳಲ್ಲಿ ತಂತ್ರಾಂಶಗಳ ಅಳವಡಿಕೆ ರೈತಮಿತ್ರ ಯೋಜನೆ, ಸಚಿವಾಲಯವಾಹಿನಿ, ಮುಖ್ಯವಾಹಿನಿ, ಮಾರಾಟವಾಹಿನಿ ಇತ್ಯಾದಿ ಯೋಜನೆಗಳನ್ನು ಈಗಾಗಲೆ ಅನುಷ್ಠಾನಗೊಳಿಸಲಾಗಿದೆ.

ಬಾಲ ಕಾರ್ಮಿಕರುಗಳಿಗೆ ಸವಲತ್ತು

86 (321) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1-4-2002 ರಿಂದ 31-3-2003ರ ವರೆಗೆ ರಾಜ್ಯದ ವಿವಿಧ ಜಿಲ್ಲೆಗಳ ಜಿಲ್ಲಾವಾರು ಬಾಲ ಕಾರ್ಮಿಕರ ಅನ್ವೇಷಣೆ ಹಾಗೂ ಅವರ ಅಭಿವೃದ್ಧಿ ಕಾರ್ಯಗಳಿಗೆ ಬಿಡುಗಡೆಯಾದ ಹಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) 31-1-2003ರ ವರೆಗೆ ಗುರುತಿಸಲ್ಪಟ್ಟ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು; ಅವರಿಗೆ ಸರ್ಕಾರ ನೀಡಿದ ಸವಲತ್ತುಗಳೇನು (ವಿವರ ನೀಡುವುದು)

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ) 1-4-2002 ರಿಂದ 31-3-2003ರ ವರೆಗು ಬಾಲ ಕಾಮಿಕ ನಿರ್ಮೂಲನಾ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿಗಳಿಗೆ ರೂ. 80.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಜಿಲ್ಲಾವಾರು ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಜಿಲ್ಲೆಯ ಹೆಸರು	ಬಿಡುಗಡೆಯಾದ ಮೊತ್ತ (ಲಕ್ಷ ರೂ.ಗಳಲ್ಲಿ)
1.	ದಾವಣಗೆರೆ	28
2.	ಕೋಲಾರ	13
3.	ಶಿವಮೊಗ್ಗ	4
4.	ಬಾಗಲಕೋಟೆ	7
5.	ಕೊಪ್ಪಳ	1
6.	ಚಿತ್ರದುರ್ಗ	2
7.	ಮೈಸೂರು	1
8.	ಗುಲ್ಬರ್ಗಾ	18

ಕ್ರ. ಸಂ.	ಜಿಲ್ಲೆಯ ಹೆಸರು	ಬಿಡುಗಡೆಯಾದ ಮೊತ್ತ (ಲಕ್ಷ ರೂ.ಗಳಲ್ಲಿ)
9.	ಚಾಮರಾಜನಗರ	3
10.	ಉತ್ತರ ಕನ್ನಡ	3
	ಒಟ್ಟು	80 ಲಕ್ಷಗಳು

ಅ) 31-1-2003ರ ಅಂತ್ಯಕ್ಕೆ ಜಲ್ಲಾ ಆಡಳಿತ ಹಾಗೂ ಕಾರ್ಮಿಕ ಇಲಾಖೆಯು ಸರ್ಕಾರದ ಇತರ ಅಧಿಕಾರಿಗಳ ಸಹಕಾರದೊಂದಿಗೆ ಸಮೀಕ್ಷೆ ನಡೆಸಿ, 39333 ಬಾಲ ಕಾರ್ಮಿಕರನ್ನು ಗುರುತಿಸಿರುತ್ತಾರೆ. ಅವರುಗಳ ಪೈಕಿ 7154 ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಹಾಗೂ 32179 ಮಕ್ಕಳನ್ನು ಅಪಾಯಕಾರಿ ಅಲ್ಲದ ಉದ್ದಿಮೆಗಳಲ್ಲಿ ಗುರುತಿಸಲಾಗಿದೆ.

ರಾಜ್ಯ ಸರ್ಕಾರವು ಗುರುತಿಸಿ ಬಾಲ ಕಾರ್ಮಿಕರನ್ನು ಪುನರ್ವಸತಿಗೊಳಿಸುವ ಸಲುವಾಗಿ ಬಾಲ ಕಾರ್ಮಿಕ ಕ್ರಿಯಾ ಯೋಜನೆ ಅಡಿಯಲ್ಲಿ ವಿಶೇಷ ವಸತಿ ಶಾಲೆಗಳನ್ನು ತೆರೆದು, ಗುರುತಿಸಿದ ಬಾಲ ಕಾರ್ಮಿಕರನ್ನು ವಿಶೇಷ ವಸತಿ ಶಾಲೆಗಳಲ್ಲಿ ದಾಖಲು ಮಾಡಿ, ಅವರಿಗೆ ವಸತಿ, ಅನೌಪಚಾರಿಕ ಶಿಕ್ಷಣ, ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ ಮೂಲಕ ಪುನರ್ವಸತಿ ಕಲ್ಪಿಸಿ ನಂತರ ಅರ್ಹ ಮಕ್ಕಳನ್ನು ಮುಖ್ಯವಾಹಿನಿ ಶಾಲೆಗೆ ಸೇರಿಸಲಾಗುತ್ತಿದೆ.

ಕ್ರಿಯಾ ಯೋಜನೆ ಅಡಿಯಲ್ಲಿ 20 ಜಿಲ್ಲೆಗಳಲ್ಲಿ 100 ವಿಶೇಷ ವಸತಿ ಶಾಲೆಗಳನ್ನು ಮಂಜೂರು ಮಾಡಿದ್ದು, ಅವುಗಳ ಪೈಕಿ 58 ವಿಶೇಷ ವಸತಿ ಶಾಲೆಗಳು ಈಗಾಗಲೇ ನಡೆಯುತ್ತಿವೆ.

ಉಳಿದ 7 ಜಿಲ್ಲೆಗಳಲ್ಲಿ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಅಡಿಯಲ್ಲಿ 124 ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ.

ಅಲ್ಲದೆ ನಾರ್ವೆಯನ್ ಸರ್ಕಾರದ ಆರ್ಥಿಕ ಸಹಾಯದೊಂದಿಗೆ, ಯೂನಿಸೆಫ್ ಸಹಯೋಗದೊಂದಿಗೆ ದಾವಣಗೆರೆ ಮತ್ತು ಗುಲ್ಬರ್ಗಾ ತಾಲ್ಲೂಕುಗಳಲ್ಲಿ ಸೂರಾಡ್ ಯೋಜನೆ ಅಡಿಯಲ್ಲಿ 16 ವಿಶೇಷ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ.

ಇವುಗಳಲ್ಲದೆ ಶಿಕ್ಷಣ ಇಲಾಖೆಯು ಬಾಲ ಕಾರ್ಮಿಕರು ಸೇರಿ, ಶಾಲೆಯಿಂದ ಹೊರಗಡೆ ಇರುವ ಮಕ್ಕಳನ್ನು "ಚಿಣ್ಣರ ಅಂಗಳ" ಕಾರ್ಯಕ್ರಮ ಮುಖಾಂತರ ಮುಖ್ಯ ವಾಹಿನಿ ಶಾಲೆಗಳಿಗೆ ಸೇರಿಸಲಾಗುತ್ತಿದೆ.

ಮಲ್ಪೆ - ಉಡುಪಿ - ಕಡಿಯಾಳಿ - ಆಗುಂಬೆ ರಸ್ತೆಗಳನ್ನು ಅಗಲ ಮಾಡುವುದು

87 (324) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ-ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಲ್ಪೆ-ಉಡುಪಿ-ಕಡಿಯಾಳಿ ಆಗುಂಬೆ ರಸ್ತೆ ಅಗಲ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಮಲ್ಪೆ-ಉಡುಪಿ-ಕಡಿಯಾಳಿ ಭಾಗ ಮಾತ್ರ);

ಆ) ಸದರಿ ಪ್ರಸ್ತಾವನೆಯಲ್ಲಿ ಸಿದ್ಧಪಡಿಸಿದ ಅಂದಾಜು ಮೊತ್ತವೆಷ್ಟು; (ವಿವರಗಳನ್ನು ನೀಡುವುದು);

ಇ) ಈ ಕಾಮಗಾರಿಗೆ ಸರ್ಕಾರ ಯಾವಾಗ ಮಂಜೂರಾತಿ ನೀಡುವುದು?